| ಕಾರ್ಯಪಾಲಕ ಅಭಿಯಂತರರ ಕಛೇರಿ<br>ನಂ.2ನೇ ಕಟ್ಟಡಗಳ ವಿಭಾಗ,<br>ಲೋಇ ಅನೆಕ್ಸ್ ಕಟ್ಟಡ, 1ನೇ ಮಹಡಿ,<br>ಕೆ.ಆರ್. ವೃತ್ತ, ಬೆಂಗಳೂರು 01. | ಕರ್ನಾಟಕ ಸರ್ಕಾರ | ದೂರವಾಣಿ : 080-22122856<br>ಫ್ಯಾಕ್ಸ್ : 080-22123368<br>ಇ ಮೇಲ್: eebldno2@gmail.com |
| --- | --- | --- |

(ಲೋಕೋಪಯೋಗಿ ಇಲಾಖೆ)


=====================================================================

ಸಂಖ್ಯೆ:ಕಾನಿಇಂ:ಕವಿ2:ಸಇಂ-2 :25-26 /1898    ದಿನಾಂಕ: 19/06/25

ಇವರಿಗೆ:

**Principal,**
**BGS Bloomfield School**
**(Bolleneni Gurappa Sunitha Education Trust (BGS)**
**No.38, 6th Ccross, 3rd Block**
**Thyagaraja Nagar,**
**Bengaluru-560070.**

ಮಾನ್ಯರೆ,

ವಿಷಯ: **BGS Bloomfield School, Bengaluru** ರವರ 2025-2026 ನೇ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1)ತಮ್ಮ ಮನವಿ ಪತ್ರ ದಿನಾಂಕ:13.06.2025.
2)ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:59/ಬಿಇಡಿ/2019 ದಿ:06-05-2022.
3)ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ. 9 ನೇ ಕಟ್ಟಡಗಳ ಉಪ ವಿಭಾಗ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: 403/25-26: ದಿ:18.06.2025.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ **Principal, BGS Bloomfield School (Bolleneni Gurappa Sunitha Education Trust (BGS) No.38, 6th Ccross, 3rd Block Thyagaraja Nagar, Bengaluru-560070.** ಶಾಲೆ ಕಟ್ಟಡಕ್ಕೆ ಸಂಬಂಧಿಸಿದಂತೆ ಸುರಕ್ಷತಾ ಪ್ರಮಾಣ ಪತ್ರವನ್ನು ಕೋರಿರುತ್ತೀರಿ.

ಉಲ್ಲೇಖ (2)ರ ಸರ್ಕಾರದ ಸುತ್ತೋಲೆ ತಿದ್ದುಪಡಿಯ ಅನುಸಾರ ಲೋಕೋಪಯೋಗಿ ಇಲಾಖೆಯ ಸಂಹಿತೆಯ ಅನ್ವಯ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಈ ಕಛೇರಿಯಿಂದ ಪಡೆಯಲು ಮೌಲ್ಯ **ರೂ.5000.00** ಅನ್ನು (ಡಿಡಿ ಸಂಖ್ಯೆ: **245622** ದಿನಾಂಕ:**18-06-2025**) ಈ ಕಛೇರಿಗೆ ಸಲ್ಲಿಸಿರುತ್ತೀರಿ.

ಮುಂದುವರೆದು, ದಿನಾಂಕ: **17.06.2025** ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.9ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರು ಸ್ಥಳ ಪರಿವೀಕ್ಷಣೆ ಕೈಗೊಂಡಿರುತ್ತಾರೆ. ಉಲ್ಲೇಖ (3)ರ ಪತ್ರದಲ್ಲಿ ಕೈಗೊಂಡಿರುವ ಪರೀಕ್ಷೆಗಳು ಹಾಗೂ ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿವೀಕ್ಷಿಸಿ ಶಿಫಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಈ ಕೆಳಕಂಡ ಷರತ್ತುಗಳನ್ನೊಳಪಟ್ಟು ಸದರಿ ಕಟ್ಟಡವು **"STRUCTURALLY STABLE"** ಎಂದು ಪರಿಗಣಿಸಿ ನಿರಾಕ್ಷೇಪಣಾ ಪತ್ರವನ್ನು ದಿನಾಂಕ:**19-06-2025** ರಿಂದ ದಿನಾಂಕ:**18-06-2026** ರವರೆಗೆ ನೀಡಲಾಗಿರುತ್ತದೆ.

1) ಸದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಾಬ್ದಾರಿಯ ಸದರಿ ಸಂಸ್ಥೆಯವರದಾಗಿರುತ್ತದೆ.
2) ಅಗ್ನಿ ಶಾಮಕ ಇಲಾಖೆಯಿಂದ ಅಗ್ನಿ ಸುರಕ್ಷತಾ ಪ್ರಮಾನ ಪತ್ರ (Fire Safety Compliance), ಮತ್ತು ಇತರೆ ಅವಶ್ಯಕ ಅನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
3) ಕಟ್ಟಡವನ್ನು ಕಾಲಾಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನೆ ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ವಾರ್ಷಿಕ ನಿರ್ವಹಣೆ ಮಾಡತಕ್ಕದ್ದು.

PDF Scanner ACE Scanner

4) ವಿದ್ಯಾರ್ಥಿಗಳ, ಸಿಬ್ಬಂದಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ವ್ಯವಸ್ಥೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ನಿಯಮಾನುಸಾರ ಅಳವಡಿಸತಕ್ಕದ್ದು.
5) ಕಟ್ಟಡದ ಸದೃಡತೆಗೆ ದಕ್ಕೆಯಾಗುವಂತಹ ಯಾವುದೇ ಇತರೆ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದಲ್ಲ.
6) ಮುಂದಿನ ದಿನಗಳಲ್ಲಿ ಕಟ್ಟಡದ ಯಾವುದಾದರು ಬದಲಾವಣೆ ಅಥವಾ ನಿರ್ಮಾಣವನ್ನು ಸಂಬಂಧಪಟ್ಟ ಪ್ರಾಧಿಕಾರದ ಅನುಮತಿ ಇಲ್ಲದೆ ಮಾಡಿದ್ದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುತ್ತದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.

ACE Scanner